ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಸರ್ಕಾರಿ ನೌಕರರಿಗೆ ತಮ್ಮ ಮಾತೃ ಇಲಾಖೆಯಿಂದ ಬೇರೆ ಇಲಾಖೆಗೆ ಎರವಲು ಸೇವೆಯ ಮೇಲೆ ಗರಿಷ್ಠ ಕಾಲಾವಧಿಯ ಬಗ್ಗೆ ನಿರ್ದಿಷ್ಟ ಪಡಿಸಿದ ಮಾರ್ಗದರ್ಶನ ಇದೆಯೇ;

ಬಿ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಗರಿಷ್ಠ ಎರವಲು ಸೇವೆಯ ಅವಧಿ ಪೂರ್ಣಗೊಂಡಿರುವ ಒಟ್ಟು ಎಷ್ಟು ಸರ್ಕಾರಿ ನೌಕರರು ಇದ್ದಾರೆ;

ಸಿ) ಅಂತಹ ಸರ್ಕಾರಿ ನೌಕರರನ್ನು ಎರವಲು ಸೇವೆಯಿಂದ ಅವರ ಮಾತೃ ಇಲಾಖೆಗೆ ಮರಳಿ ಕಳುಹಿಸುವ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಎ) ಎರವಲು ಸೇವೆಯ ಮೇಲೆ ಕನಿಷ್ಠ 3 ವರ್ಷ ಗರಿಷ್ಠ 5 ವರ್ಷಗಳು.

ಬಿ) ಒಂದು

ಸಿ) ನೌಕರರನ್ನು ತಮ್ಮ ಮಾತೃ ಇಲಾಖೆಗೆ ಸಾಮಾನ್ಯ ವರ್ಗಾವಣೆಯಲ್ಲಿ ಮರಳಿ ಕಳುಹಿಸಲು ಕ್ರಮ ಕೈಗೊಳ್ಳುವಂತೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿದೆ ?

ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳನ್ನು ಪ್ರಾರಂಭಿಸಲು ಬಂದಿರುವ ಪ್ರಸ್ತಾವನೆಗಳು

315 (1832): ಶ್ರೀ ಮನೋಹರ್ ಐನಾಪುರ (ಬಳ್ಳಿಗಳ್ಳಿ):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ರಾಜ್ಯದಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳನ್ನು ಹಾಗೂ ಶಿಶು ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲಾಗುವುದೇ;

ಬಿ) ಈ ವರ್ಷ ಎಷ್ಟು ಪ್ರಸ್ತಾವನೆಗಳು ಬಂದಿರುತ್ತವೆ.

ಸಿ) ವಸತಿ ಗೃಹಗಳನ್ನು ಯಾರಿಂದ ಎಲ್ಲಿ ಪ್ರಾರಂಭಿಸಲು ಮನವಿ ಬಂದಿರುತ್ತದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಎ) ಹೌದು.

ಬಿ) ಈ ವರ್ಷದಲ್ಲಿ ಆರು ಪ್ರಸ್ತಾವನೆಗಳು ಬಂದಿರುತ್ತವೆ.

ಸಿ) ಸಂಸ್ಥೆಯ ಹೆಸರು	ಸ್ಥಳ
1. ವನಿತ ಮಿತ್ರಕೂಟ, ಕೋಲಾರ	ಕೋಲಾರ
2. ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘ, ಹುನಗುಂದ, ಬಿಜಾಪುರ ಜಿಲ್ಲೆ,	ಹುನಗುಂದ
3. ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆ, ತುಮಕೂರು	ಮಧುಗಿರಿ
4. ಜಿಲ್ಲಾ ಬಣಜಾರ ವಿದ್ಯಾಸಂಸ್ಥೆ, ಬಿಜಾಪುರ	ಬಿಜಾಪುರ
5. ನಗರ ಮತ್ತು ಗ್ರಾಮಾಂತರ ಅಭಿವೃದ್ಧಿ ಸಂಘ, ಕೆ.ಜಿ.ಎಫ್	ಕೆ.ಜಿ.ಎಫ್.
6. ಚಂದ್ರಪ್ರಭಾ ಮಹಿಳಾ ಮಂಡಳಿ, ಬಿಜಾಪುರ	ಬಿಜಾಪುರ

ಶ್ರೀ ಮನೋಹರ್ ಐನಾಪುರ:– ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ವರ್ಕಿಂಗ್ ಉಮೆನ್ಸ್ ಹಾಸ್ಟೆಲ್‌ಗಳು ಎಷ್ಟಿವೆ ? ಎಷ್ಟಕ್ಕೆ ಪ್ರಪೋಸಲ್ಸ್ ಬಂದಿವೆ ? ಅವುಗಳಿಗೆ ಸರ್ಕಾರದವರು ಮಂಜೂರಾತಿ ನೀಡುತ್ತಾರೆಯೇ ?' ಹೇಗೆ ಎಂದು ಕೇಳಿದ್ದಕ್ಕೆ ಅವರು ಆರು ಪ್ರಪೋಸಲ್ಸ್ ಇದ್ದಾವೆ. ಅವನ್ನೆಲ್ಲ ಮಂಜೂರು ಮಾಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರ ಈ ವರ್ಕಿಂಗ್ ಉಮೆನ್ಸ್ ಹಾಸ್ಟೆಲ್‌ಗಳಿಗೆ 'ಎಷ್ಟು ಹಣವನ್ನು ನಿಗದಿ ಮಾಡಿದೆ ಮತ್ತು ಈ 6 ಪ್ರಪೋಸೆಲ್ಸ್‌ಗಳು ಏನು ಬಂದಿರುತ್ತವೆ, ಇವೆಲ್ಲವುಗಳಿಗೆ ಮಂಜೂರಾತಿ ನೀಡುವುದೇ ? ಮತ್ತು ಈ ವಸತಿ ನಿಲಯಗಳಿಗೆ ಎಷ್ಟು ಅನುದಾನ ನಿರ್ದಿಷ್ಟವಾಗಿ ನಮ್ಮ ರಾಜ್ಯ ಸರ್ಕಾರದವರು ಇಟ್ಟಿದ್ದಾರೆನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.?

ಶ್ರೀ ಧರ್ಮಸಿಂಗ್:– ಮಾನ್ಯ ಅಧ್ಯಕ್ಷರೇ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ 28 ವರ್ಕಿಂಗ್ ಉಮೆನ್ಸ್ ಹಾಸ್ಟೆಲ್ಲುಗಳು ಕೆಲಸ ಮಾಡುತ್ತಿವೆ. ಈ ವರ್ಷ 6 ವರ್ಕಿಂಗ್ ಉಮೆನ್ಸ್ ಹಾಸ್ಟೆಲ್‌ಗಳಿಗೆ ಪ್ರಸ್ತಾವನೆಯನ್ನು ಕಳುಹಿಸುತ್ತಿದ್ದೇವೆ. ಈಗಾಗಲೇ 7ಕ್ಕೆ ನಾವು ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆ. ಕೇಂದ್ರದಲ್ಲೂ ನಮ್ಮ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಈಗ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಸಂಬಂಧಪಟ್ಟಂತೆ ನಮ್ಮವರಾದ ಶ್ರೀಮತಿ ಬಸವರಾಜೇಶ್ವರಿಯವರು ಈ ಖಾತೆಯ ಮಂತ್ರಿಗಳಾಗಿದ್ದಾರೆ. ಅವರು ಎರಡು ಬಾರಿ ಇಲ್ಲಿಗೆ ಬಂದಾಗ ಇದರ ಬಗ್ಗೆ ಸಮಾಲೋಚನೆ ಮಾಡಿದ್ದೇವೆ. ಫೋನ್‌ನ ಮುಖಾಂತರ ಈ ವರ್ಷದಲ್ಲಿ ಎಲ್ಲೆಲ್ಲಿ ವರ್ಕಿಂಗ್ ಉಮೆನ್ಸ್ ಹಾಸ್ಟೆಲ್‌ಗಳು ಪೆಂಡಿಂಗ್ ಇವೆ, ಅವಕ್ಕೆ ಪ್ರಪೋಸಲ್ಸ್ ಕಳುಹಿಸಿಕೊಡುವಂತೆ ಅವರು ಹೇಳಿದ್ದಾರೆ. ಸರ್ಕಾರಕ್ಕೆ ಎಲ್ಲಿಂದ ಮನವಿಗಳು ಬಂದಿವೆ, ಇನ್ನು ಎಲ್ಲಿಂದ ಬರಬೇಕಾಗಿದೆ. ಆಯಾ ಜಿಲ್ಲೆಗಳಿಂದ ತರಿಸಿಕೊಂಡು ನಾವು ಕೊಡುತ್ತಿದ್ದೇವೆ. ಒಪ್ಪಾರೆ ಯಾವುದಾದರೂ ವರ್ಕಿಂಗ್ ಉಮೆನ್ಸ್ ಹಾಸ್ಟೆಲ್ ಪ್ರಪೋಸಲ್ಸ್ ಬರಬೇಕಾದರೆ ಅಲ್ಲಿ ಅವರಿಗೆ ಒಂದು ಸ್ವಂತದ್ದಾದ ಸ್ಥಳ ಬೇಕು. ಮತ್ತು 75 ಪರಸೆಂಟ್ ಗ್ರಾಂಟ್ ಇನಿದೆ ಅದು ಸೆಂಟ್ರಲ್ ಗೌವರ್ನಮೆಂಟ್‌ನಿಂದ ಬರುತ್ತದೆ. 12 1/2 ಪರ್ಸೆಂಟ್ ಗೌವರ್ನ್‌ಮೆಂಟ್‌ನಿಂದ ಕೊಡುತ್ತೇವೆ, ಉದ್ದಾಗಿ ನಡೆಸತಕ್ಕಂಥ ಸಂಸ್ಥೆಗಳು ಇನ್ನು 12 1/2 ಪರ್ಸೆಂಟ್ ವಹಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರದು ಒಂದು ಪ್ರಪೋಸಲ್ಸ್ ಬಂದಿದೆ. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಿದ್ದೇವೆ.

ಶ್ರೀ ಮನೋಹರ್ ಐನಾಪುರ್:– ಮಾನ್ಯ ಅಧ್ಯಕ್ಷರೇ, ಈಗ ಇರತಕ್ಕ ಎಲ್ಲ ಪ್ರಪೋಸೆಲ್ಸ್‌ಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಮಂಜೂರಾತಿಯನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದರು. ಇತ್ತೀಚೆಗೆ ಪ್ರತಿ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕುಗಳಲ್ಲಿ ವಿಶೇಷವಾಗಿ ಸರ್ಕಾರಿ ನೌಕರಿಯಲ್ಲಾಗಲಿ, ಅಥವಾ ಪ್ರವೇಟ್‌ನಲ್ಲಿಯಾಗಲಿ ಕೆಲಸ ಮಾಡುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಕನಿಷ್ಠ ಇಂಥ ಒಂದು ವಸತಿ ನಿಲಯವನ್ನು ಸರ್ಕಾರ ತಮ್ಮದೇ ಒಂದು ಪೆಚ್ಚದಲ್ಲಿ ಪತಕ್ಕೆ ಮಾಡಬಾರದೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್:– ಸರ್ಕಾರ ಕೂಡ ಪರಿಶೀಲಿಸಬಹುದು. ಇಲ್ಲಿಯವರೆಗೆ ಎಲ್ಲಾ ಕಡೆಗ ನಡೆಸತಕ್ಕಂಥ ಸಂಸ್ಥೆಗಳನ್ನು ಅವರೇ ನಡೆಸುತ್ತಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ವರ್ಕಿಂಗ್ ವುಮನ್ಸ್ ಹಾಸ್ಟೆಲ್ ಬೇಕಾಗಿದೆ ಎನ್ನುವುದು ಸರ್ಕಾರದ ನೀತಿಯಾಗಿದೆ. ಎಲ್ಲಾ ಅವಶ್ಯಕತೆಗಳನ್ನು ಕೊಡುವುದು ಸರ್ಕಾರದ ನೀತಿಯಾಗಿದೆ, ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸ್ವಾಮಿ, ಉದ್ಯೋಗಸ್ಥ ಮಹಿಳೆಯರಿಗೋಸ್ಕರ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಧನಸಹಾಯದಿಂದ ಕಟ್ಟಿರತಕ್ಕ ಕಟ್ಟಡಗಳು ದುರುಪಯೋಗವಾಗಿವೆ. ಬೆಂಗಳೂರಿನಲ್ಲಿ ಒಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯವರು ಕೇಂದ್ರ ಸರ್ಕಾರದಿಂದ ಪಡೆದಿರತಕ್ಕ ಒಂದು

ಕೋಟಿ ರೂಪಾಯಿ ಹಣದಲ್ಲಿ ಕಟ್ಟಿರತಕ್ಕ ಕಟ್ಟಡದಲ್ಲಿ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಇದರ ಬಗ್ಗೆ ತಾವು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವೆ ? ಎರಡನೆಯದಾಗಿ, 3 ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಿರತಕ್ಕ ವಿಧಾನಸೌಧಕ್ಕೆ ಹತ್ತಿರವಾಗಿರತಕ್ಕ ಹೆಣ್ಣುಮಕ್ಕಳ ವಸತಿ ನಿಲಯ ದುರುಪಯೋಗವಾಗುತ್ತಿದೆ. ಅದನ್ನು ಯಾವ ಉದ್ದೇಶಕ್ಕೋಸ್ಕರ ಕಟ್ಟಿದ್ದಾರೆ ಅದರ ಉಪಯೋಗವಾಗದೆ ಇರುವುದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ?

ಶ್ರೀ ಧರ್ಮಸಿಂಗ್:– ಉಪನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ. ಅದು ನನ್ನ ಗಮನಕ್ಕೆ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಮಾಡತಕ್ಕ ಹೆಣ್ಣು ಮಕ್ಕಳಿಗೆ ವಸತಿ ನಿಲಯ ಕೊಡತಕ್ಕದ್ದು ನಮ್ಮ ಕೆಲಸವಾಗಿದೆ. ಕೇಂದ್ರ ಸರ್ಕಾರ ಅದಕ್ಕೆ ಗ್ರಾಂಟ್ ಕೊಡುತ್ತಿದೆ. ಇಲ್ಲಿ ಎರಡು ಕಡೆ ಮತ್ತು ಬೇರೆ ಕಡೆ ಎಲ್ಲಿ ಹೆಣ್ಣು ಮಕ್ಕಳಿಗೆ ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ಆಗಿ ಕೊಟ್ಟಿದ್ದೇವೆ ಅಲ್ಲಿ ಇಂಜಿನಿಯರಿಂಗ್ ಕಾಲೇಜ್, ಆಗಲಿ ಅಥವಾ ಬೇರೆ ವಿಷಯಕ್ಕೆ ಆ ಕಟ್ಟಡವನ್ನು ಉಪಯೋಗಿಸುತ್ತಿದ್ದರೆ ಅದರ ಮೇಲೆ ನೇರವಾಗಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ:– ಮಂಡ್ಯದಲ್ಲಿ ಒಂದು ಖಾಸಗಿ ರಿಜಿಸ್ಟರ್ಡ್ ಸಂಸ್ಥೆ ನಡೆಸುತ್ತಿರುವ ವರ್ಕಿಂಗ್ ವುಮೆನ್ ಹಾಸ್ಟೆಲಿಗೆ 15 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆ. ಇವತ್ತು 15 ಲಕ್ಷ ರೂಪಾಯಿಗಳಿಗೆ ಬಿಲ್ಡಿಂಗ್ ಆಗುವುದು ಶ್ರಮದ ಕೆಲಸ. ಅಂಥದ್ದರಲ್ಲಿ ಅದಕ್ಕೆ ಚೀಫ್ ಇಂಜಿನಿಯರಿಂಗ್ ಅಪ್ರೂವಲ್ ಬೇಕೆಂದು ಹೇಳುತ್ತಾರೆ. 0.5 ಪರ್ಸೆಂಟ್ ನಾವು ಕಟ್ಟಬೇಕು. ಇದು ಸಾಧ್ಯವೆ ? ಇದಕ್ಕೆ ವಿನಾಯಿತಿ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್:– ನಿನ್ನೆ ಕೂಡ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡತಕ್ಕ ಕಾಲದಲ್ಲಿ ಹೇಳಿದ್ದೇನೆ. ಮೊದಲು ಏನು ಎಸ್ಟಿಮೇಟ್ ಪ್ರಿಪೇರ್ ಮಾಡಿದ್ದಾರೆ ಅದರಂತೆ 10-15 ಲಕ್ಷ ರೂಪಾಯಿಗಳಲ್ಲಿ ಆಗುವುದಿಲ್ಲ, 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬೇಕಾಗುತ್ತದೆ. ಅದನ್ನು ಕೂಡ ನಾವು ಮಾಡುತ್ತೇವೆ.

ತುರುವೇಕೆರೆ ತಾಲ್ಲೂಕಿನಲ್ಲಿ ಕಾನೂನು ಬಾಹಿರವಾಗಿ ಕಲ್ಲುಗಳ ಕೊರೆಯುವಿಕೆ

352 (1733): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುರುವೇಕೆರೆ ತಾಲ್ಲೂಕು ಭೈತರ ಹೊಸಹಳ್ಳಿ ಬಂಡೆಯಲ್ಲಿ ಪರವಾನಗಿ ಇಲ್ಲದೇ ಕಲ್ಲನ್ನು ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿರುವರು ?

ಶ್ರೀ ಡಿ.ಬಿ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):–

ಅ) ಬಂದಿದೆ.

ಆ) ಕಲ್ಲು ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆಯಲ್ಲದೇ ಗಣಿಗಾರಿಕೆಗೆ ಉಪಯೋಗಿಸುವ ಯಂತ್ರೋಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಮತ್ತು ಗುತ್ತಿಗೆಗಳಿಂದ ಅರ್ಜಿ ಹಾಕಿ ಅಧಿಸೂಚನೆಗಳನ್ನು ಪಡೆದು ಗುತ್ತಿಗೆ ಕರಾರನ್ನು ಮಾಡಿಕೊಳ್ಳದವರ ಅಧಿಸೂಚನೆಯನ್ನು ರದ್ದುಪಡಿಸಿ,